ಓ.ಎಸ್. ನಂ. 120/2017 ಡಿ.ಡಬ್ಲ್ಯೂ- 2

**ಸಾಕ್ಷಿಯನ್ನು ದಿನಾಂಕ 30.1.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎನ್.ಹೆಚ್.ಎಂ ವಕೀಲರಿಂದಃ**

ನನ್ನ ತಾತನ ನಾಲ್ಕು ಮಕ್ಕಳಿಗೂ ಸಹ ದಾವಆಸ್ತಿಗಳಲ್ಲಿ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ನನ್ನ ತಾತ ಬದುಕಿದ್ದಾಗಲೇ 1962 ರಲ್ಲಿ ಎಲ್ಲ ಮಕ್ಕಳಿಗೂ ವಿಭಾಗ ಮಾಡಿಕೊಟ್ಟಿರುತ್ತಾರೆ ಎನ್ನುವರು. ವಿಭಾಗವಾಗಿರುವ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ, ಕರಿಯಪ್ಪ ನವರು ಮನೆಯ ಹಿರಿಯ ಮಗನಾಗಿರುವುದರಿಂದ ವಿಭಾಗ ಪತ್ರ ಅವರ ಬಳಿ ಇರುತ್ತದೆ ಎಂದು ನನ್ನ ತಂದೆ ತಾಯಿ ನನಗೆ ಹೇಳಿರುತ್ತಾರೆ. ಸದರಿ ವಿಭಾಗಪತ್ರವು ನೋಂದಣಿಯಾಗಿರುತ್ತದಾ ಎಂದರೆ ಸಾಕ್ಷಿದಾರರು ಪಂಚಾಯಿತಿ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ ಎನ್ನುವರು. ವಿಭಾಗದ ಪ್ರಕಾರ 1981-82 ರಲ್ಲಿ ಖಾತೆಯಾಗಿರುತ್ತದೆ. 1962 ರಿಂದ 1982 ರವರೆಗೆ ಏಕೆ ಖಾತೆ- ಯಾಗಿರುವುದಿಲ್ಲ ಎಂದು ನನ್ನ ತಕರಾರಿನಲ್ಲಿ ಹೇಳಿ ಬರೆಸಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ವಿಭಾಗದ ಪ್ರಕಾರ ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು, 1982 ರಲ್ಲಿ ಖಾತೆಯಾಗಿರುತ್ತದೆ ಎನ್ನುವರು. 1982 ರಲ್ಲಿ ಯಾವ ಆಧಾರದ ಮೇಲೆ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿದಾರರು 1962 ರ ವಿಭಾಗದ ಆಧಾರದ ಮೇಲೆ ಖಾತೆಯಾಗಿರುತ್ತದೆ ಎನ್ನುವರು. 1962 ರ ವಿಭಾಗಪತ್ರವನ್ನು ಪಡೆದುಕೊಳ್ಳಲು ಪ್ರಯತ್ನಿಸಿರುತ್ತೀರಾ ಎಂದರೆ ಸಾಕ್ಷಿದಾರರು ನಾವು ಪ್ರಯತ್ನಿಸಿರುವುದಿಲ್ಲ, ಆದರೆ ವಿಭಾಗಪತ್ರ ಕರಿಯಪ್ಪನವರ ಬಳಿ ಇರುತ್ತದೆ ಎಂದು ಹೇಳಿರುತ್ತಾರೆ ಎನ್ನುವರು. ಆ ರೀತಿ ಯಾವುದೇ ವಿಭಾಗವಾಗಿರುವುದಿಲ್ಲ, ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ 2 ನೇ ಐಟಂ ಆಸ್ತಿಯನ್ನು ನನ್ನ ದೊಡ್ಡಪ್ಪನಾದ ಬಸಪ್ಪ ರವರು 1975 ರಲ್ಲಿ ಖರೀದಿಸಿರುತ್ತಾರೆ. ಸದರಿ ಬಸಪ್ಪನವರು 1975 ರಲ್ಲಿ ಸರ್ಕಾರಿ ಹುದ್ದೆಯಲ್ಲಿದ್ದರಾ ಎಂದರೆ ಸಾಕ್ಷಿದಾರರು ಅರ್ಚಕರಾಗಿದ್ದು ಪೂಜೆ ಮಾಡುತ್ತಿದ್ದರಿಂದ ಬಂದ ಹಣ, ವ್ಯವಸಾಯ ಮತ್ತು ಹಸು ಸಾಕಣೆಯಿಂದ ಬಂದ ಹಣದಿಂದ ಖರೀದಿಸಿರುತ್ತಾರೆ ಎನ್ನುವರು. ಮುಜರಾಯಿ ಇಲಾಖೆಯಿಂದ ಅವರು ಅರ್ಚಕರಾಗಿ ನೇಮಕಗೊಂಡಿದ್ದರು. ಆ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ. 1975 ರಲ್ಲಿ ಬಸಪ್ಪನವರು ಅರ್ಚಕರಾಗಿ ಕೆಲಸ ಮಾಡುತ್ತಿರಲಿಲ್ಲ, ಒಟ್ಟು ಕುಟುಂಬದಲ್ಲಿ ವ್ಯವಸಾಯ

ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಬಸಪ್ಪನವರು ಒಟ್ಟು ಕುಟಂಬದ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು 1962 ರ ವಿಭಾಗದಲ್ಲಿ ಬಂದ ಆಸ್ತಿಯನ್ನು ವ್ಯವಸಾಯ ಮಾಡುತ್ತಿದ್ದರು ಎನ್ನುವರು. ಅವರು ಅರ್ಚಕರಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಬಸಪ್ಪನವರಿಗೆ 1975 ರಲ್ಲಿ ಆಸ್ತಿಯನ್ನು ಖರೀದಿಸಲು ನೀಡಿರುವ 2000/- ಹಣವನ್ನು ಗಳಿಸಲು ಅವರಿಗೆ ವೈಯಕ್ತಿಕವಾಗಿ ಯಾವುದೇ ಆದಾಯದ ಮೂಲ ಇರಲಿಲ್ಲ, ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನಿಡಿ33 ರಲ್ಲಿ ದಾವ 2 ನೇ ಐಟಂ ಆಸ್ತಿಯನ್ನು ನನ್ನ ತಾತ ವೆಂಕಟಪ್ಪ ಅಲಿಯಾಸ್ ಕರಿಯಪ್ಪರವರಿಗೆ ಸಿದ್ದಚಾರಿಯ ಮಗ ಪುಟ್ಟಸೋಮಚಾರಿಯವರು 500/- ರೂ.ಗಳಿಗೆ ಸದರಿ ಆಸ್ತಿಯನ್ನು ಬೋಗ್ಯ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿದಾರರು ಆ ರೀತಿ ಹೇಳಿರುವುದನ್ನು ಕೇಳಿರುತ್ತೇನೆ ಎನ್ನುವರು. ಸದರಿ ನೊಂದಾಯಿತ ಬೋಗ್ಯಪತ್ರ ಬಿಡುಗಡೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ರೀತಿ ಬಿಡುಗಡೆಯಾಗಿರುತ್ತದೆ ಎಂದರೆ ಸಾಕ್ಷಿದಾರರು ಸದರಿ ಪುಟ್ಟಸೋಮಚಾರಿ ಮತ್ತು ಲಿಂಗಮ್ಮರವರು ಬೋಗ್ಯದ ಸಾಲ ತೀರಿಸಲು ಮತ್ತು ಕುಟುಂಬದ ಅವಶ್ಯಕತೆಗಾಗಿ ದಾವ 2 ನೇ ಐಟಂ ಆಸ್ತಿಯನ್ನು ಬಸಪ್ಪರವರಿಗೆ ಮಾರಾಟ ಮಾಡಲು ನಿರ್ಧರಿಸಿರುತ್ತಾರೆ ಎನ್ನುವರು. ಬಿಡುಗಡೆಯಾಗಿರುವ ಬಗ್ಗೆ ದಾಖಲೆ ಇರುತ್ತದಾ ಎಂದರೆ ಸಾಕ್ಷಿದಾರರು ದಾಖಲೆ ಇರುವುದಿಲ್ಲ ಎನ್ನುವರು. ನನ್ನ ದೊಡ್ಡಪ್ಪನಾದ ಬಸಪ್ಪನವರು ದಾವ 2 ನೇ ಐಟಂ ಆಸ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಈ ದಾವೆಯ ವಾದಿಯ ಮೇಲೆ ದಾವೆಯನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಈ ದಾವೆ ಸಲ್ಲಿಸಿದ ನಂತರ ನನ್ನ ದೊಡ್ಡಪ್ಪನಾದ ಬಸಪ್ಪನವರು ಸದರಿ ದಾವೆಯನ್ನು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವ 2 ನೇ ಐಟಂ ಆಸ್ತಿಯಲ್ಲಿ 29 ಗುಂಟೆ ಜಮೀನನ್ನು ಅಚ್ಚುಪಾಲಿಗೆ ಬಿಟ್ಟಿರುವ ಬಗ್ಗೆ ದಾಖಲಾತಿ ಇರುತ್ತದಾ ಎಂದರೆ ಸಾಕ್ಷಿದಾರರು ಪಹಣಿಯಲ್ಲಿ ಅವರ ಹೆಸರು ಬರುತ್ತಿತ್ತು ಎನ್ನುವರು. ಸರ್ವೆ ನಂ.14 ರ ಜಮೀನು 1982 ರಲ್ಲಿ ಖಾತೆ ಮಾಡಿಸಿಕೊಂಡಾಗ ಪೋಡಾಗಿ 14/1 ಕರಿಯಪ್ಪನವರಿಗೆ, 14/2 ಬಸಪ್ಪನವರಿಗೆ, 14/3 ನಂಜಪ್ಪನವರಿಗೆ ಮತ್ತು 14/4 ಚಿಕ್ಕತಾಯಮ್ಮನವರಿಗೆ ಖಾತೆಯಾಗಿರುತ್ತದೆ ಎನ್ನುವರು.

ದಾವ 3 ನೇ ಐಟಂ ಆಸ್ತಿಯು ನನ್ನ ತಂದೆ ನಂಜಪ್ಪ ಮತ್ತು ನನ್ನ ದೊಡ್ಡಪ್ಪನಾದ ಬಸಪ್ಪನವರಿಗೆ 1983–84 ರಲ್ಲಿ ಭೂ ನ್ಯಾಯಾ ಮಂಡಳಿಯಿಂದ ಮಂಜೂರಾಗಿರುತ್ತದೆ. ಸದರಿ ಆಸ್ತಿಯು ಒಟ್ಟು ಕುಟುಂಬದ ಪರವಾಗಿ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಭೂ ನ್ಯಾಯಮಂಡಳಿಗೆ ನೀಡಿರುವ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಹಾಜರುಪಡಿಸಿರಬಹುದು. ದಾವ 3 ನೇ ಐಟಂ ಆಸ್ತಿಯ ಖಾತೆಯು ನನ್ನ ತಂದೆ ನಂಜಪ್ಪ ತೀರಿಕೊಂಡ ನಂತರ ನನ್ನ ತಾಯಿ ಹಾಗೂ ಅವರ ನಾಲ್ಕು ಜನ ಮಕ್ಕಳ ಹೆಸರಿಗೆ ಜಂಟಿ ಖಾತಯಾಗಿರುತ್ತದೆ. 2005 ರ ನಂತರ ನನ್ನ ತಾಯಿ ಹಾಗೂ ನಮ್ಮ ಹೆಸರಿಗೆ ಜಂಟಿ ಖಾತೆಯಾಗಿರುತ್ತದೆ. 2018–19 ರಲ್ಲಿ ಈ ದಾವೆ ತನಿಖೆಗೆ ಬಾಕಿ ಇದ್ದಾಗ ನಾವು ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸಾಕ್ಷಿದಾರರು 2001 ರಲ್ಲಿ ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಹಾಗೂ ನಮ್ಮ ಹೆಸರಿಗೆ ಖಾತೆಯಾಗಿರುತ್ತದೆ ಎನ್ನುವರು. ನಿಡಿ13 ರಿಂದ ನಿಡಿ15 ರ ಪ್ರಕಾರ ಎಂ.ಆರ್ 44/18–19, 45/18–19 ರಂತೆ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿದಾರರು ನನ್ನ ತಂದೆ ತೀರಿಕೊಂಡ ನಂತರ ಖಾತೆಯಾಗಿರುತ್ತದೆ, ಆದರೆ ಯಾವಾಗ ಎಂದು ಗೊತ್ತಿರುವುದಿಲ್ಲ ಎನ್ನುವರು. ದಾವಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿಯರು ಜಂಟಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿದಾರರು ಪ್ರತ್ಯೇಕ ಸ್ವಾಧೀನದಲ್ಲಿರುತ್ತೇವೆ ಎನ್ನುವರು. ನಾವು ಪ್ರತ್ಯೇಕವಾಗಿ ಕಂದಾಯ ಕಟ್ಟಿರುವ ಬಗ್ಗೆ ದಾಖಲಾತಿ ಇರುತ್ತದೆ. ಮನೆಗಳು ಭಾಗವಾಗಿ ಪ್ರತ್ಯೇಕವಾಗಿರುವ ಬಗ್ಗೆ ದಾಖಲಾತಿ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಕಂದಾಯ ರಶೀದಿಯನ್ನು ಹಾಜರುಪಡಿಸಿರುತ್ತೇನೆ ಎನ್ನುವರು. ದಾವ 4 ನೇ ಐಟಂ ಆಸ್ತಿಯು ಭೂನ್ಯಾಯ ಮಂಡಳಿಯಿಂದ ಬಸಪ್ಪನವರಿಗೆ ಮಂಜೂರಾಗಿರುತ್ತದೆ. ಭೂನ್ಯಾಯ ಮಂಡಳಿಗೆ ಅರ್ಜಿ ನೀಡಿದಾಗ ಎಲ್ಲರೂ ಒಟ್ಟು ಕುಟುಂಬದಲ್ಲಿದ್ದರು ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಅವಶ್ಯಕತೆಗಾಗಿ ಎಲ್ಲರೂ ಒಟ್ಟಿಗೆ ಇದ್ದಾಗ ಸದರಿ ಆಸ್ತಿಯು ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಬಸಪ್ಪನವರು ಪ್ರತ್ಯೇಕವಾಗಿ ವಾಸವಿದ್ದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಆ ಬಗ್ಗೆ ಗೊತ್ತಿರುವುದಿಲ್ಲ ಎನ್ನುವರು. ದಾವ 4 ನೇ ಐಟಂ ಆಸ್ತಿಯು ಒಟ್ಟು ಕುಟುಬಂದಲ್ಲಿದ್ದಾಗ ಮಂಜೂರಾಗಿರುವ ಆಸ್ತಿಯಾಗಿದ್ದು ವಾದಿ ಮತ್ತು ಪ್ರತಿವಾದಿಯರಿಗೆ ಸಮನಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವ 2 ನೇ ಐಟಂ ಆಸ್ತಿಯನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುವುದರಿಂದ ವಾದಿ ಮತ್ತು ಪ್ರತಿವಾದಿಯರಿಗೆ ಸಮನಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಕಾರಣಗಳು ಇಲ್ಲದ ಕಾರಣ ಮುಂದುವರೆದ ಪಾಟೀ ಸವಾಲ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.